

ಪತ್ನಿ ಸರಸ್ವತಿ ಅವರೊಂದಿಗೆ ಎಸ್‌.ಎಲ್‌. ಭೈರಪ್ಪ

ಪುಸ್ತಕಗಳೂ ಇರಲಿಲ್ಲ! ಆದರೆ, ಬೆಳಗೆರೆಯವರು ಯಾವುದೇ ಪುಸ್ತಕದ ತತ್ವಸಾರದಂತೆ ಬದುಕಿದ್ದರು. ಈ ಕಾರಣಕ್ಕಾಗಿಯೇ ಭೈರಪ್ಪನವರು ಕೃಷ್ಣಶಾಸ್ತ್ರಿಗಳ ಕಡೆಗೆ ಆಗಾಗ ಬರುತ್ತಿದ್ದರು.

* * *

ನಾನು ಚಿತ್ರದುರ್ಗ ಬಿಟ್ಟು ನಾಲ್ಕೈದು ವರ್ಷಗಳ ಕಾಲ ಚೆನ್ನೈಗೆ ಹೋಗಿದ್ದು, ಅಲ್ಲಿಂದ ಮೈಸೂರಿಗೆ ಬರುವ ಹೊತ್ತಿಗೆ ಭೈರಪ್ಪನವರನ್ನು ಭೇಟಿ ಮಾಡದೆ, ದೂರವಾಣಿಯಲ್ಲಾದರೂ ಮಾತಾಡಲಾಗದೆ ಹತ್ತು ವರ್ಷಗಳೇ ಕಳೆದು ಹೋಗಿದ್ದವು. 1990ರ ಸುಮಾರಿನಲ್ಲಿ ಮೈಸೂರಿನ ಕಾಲೇಜಿಗೆ ವರ್ಗಾವಣೆಯಾಗಿರಲು ಭೈರಪ್ಪನವರು ಸಂಜೆಯ ವಾಯುವಿಹಾರವೆಂದು ಬರುತ್ತಾ, ನಮ್ಮ ಮನೆಯ ಕಡೆ ವಿಚಾರಿಸುವಲ್ಲಿ ನಾನು ಇರಲಿಲ್ಲ. ಬಂದವರು ಭೈರಪ್ಪನವರೆಂಬ ಸಂಗತಿ ಕೇಳಿ, ಹತ್ತು ವರ್ಷವಾದರೂ ನನ್ನನ್ನು ನೆನಪಿನಲ್ಲಿ ಇಟ್ಟುಕೊಂಡಿದ್ದಾರಲ್ಲ ಎಂದು ಆಶ್ಚರ್ಯವಾಯಿತು. ಅವರು ನನ್ನ ಮರೆತೇ ಬಿಟ್ಟಿರುತ್ತಾರೆಂಬ ಕಾರಣಕ್ಕಾಗಿ, ಮೈಸೂರಿಗೆ ಬಂದು ನೆಲೆಯೂರಿದ ಆರೇಳು ತಿಂಗಳು ಅವರನ್ನು ಮಾತನಾಡಿಸುವ ಸಾಹಸ ಮಾಡಿರಲಿಲ್ಲ.

ತದನಂತರ ಅವರೊಡನೆ ದೂರವಾಣಿ ಮಾಡಿ ಮಾತಾಡುವಲ್ಲಿಂದ, ಸಂಜೆಯ ಹೊತ್ತು ಮನೆಗೂ ಬರುತ್ತಾ ಅವರು ಆ ಹೊತ್ತಿನ ಪ್ರವಾಸಾನುಭವಗಳನ್ನು ಮಾತನಾಡುತ್ತಿದ್ದರೇ ಶಿವಾಯೀ ಮತ್ತೊಬ್ಬ ಲೇಖಕ, ಸಾಹಿತಿಗಳ ವಿಚಾರ ಪ್ರಸ್ತಾಪಿಸುತ್ತಿರಲಿಲ್ಲ. ಇನ್ನು ವಿಮರ್ಶಕರ ಹೆಸರೇನಾದರೂ ಪ್ರಸ್ತಾಪವಾದರೆ, ಅವರ ಪರಿಚಯವೇ ಇಲ್ಲದಂತೆ– ಅವರು ಯಾರು, ಎಲ್ಲಿದ್ದಾರೆ ಎಂದಷ್ಟೇ ಕೇಳುತ್ತಿದ್ದರು. ಆ ಕಾಲಕ್ಕೆ ಪ್ರಸಿದ್ಧ ವಿಮರ್ಶಕರಾಗಿದ್ದ ಕೀರ್ತಿನಾಥ ಕುರ್ತಕೋಟಿ ಅವರಿಂದ ಹಿಡಿದು, 1990–2000ದ ಹೊತ್ತಿನ